

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**

ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೧

೧೯೪೩ರ ವರ್ಷವು ಇಡೀ ಬಂಗಾಳಕ್ಕೆ ಅಸಹನೀಯವಾದ ದುರ್ದೆಶೆಯನ್ನು ತಂದಿತ್ತು. ಶ್ಯಾಮಲಾತಾಲ್‌ನಲ್ಲಿದ್ದ ಮಹಾರಾಜರು, ಬಂಗಾಳದಿಂದ ಬರುತ್ತಿದ್ದ ಪತ್ರಗಳಿಂದ ದುರ್ಭಿಕ್ಷದ ಹೃದಯ ವಿದ್ರಾವಕ ಸುದ್ದಿಗಳನ್ನು ತಿಳಿಯುತ್ತಿದ್ದರು. ಅವರ ಮೈ ನಡುಗುತ್ತಿತ್ತು. ಕ್ಷಾಮಪೀಡಿತರಿಗೆ ಯಥಾಶಕ್ತಿ ಸಹಾಯ ಮಾಡುವಂತೆ ಉಪದೇಶಿಸುತ್ತಿದ್ದರು. ರಾಮಕೃಷ್ಣ ಮಿಷನ್ ಈ ಹೃದಯ ವಿದ್ರಾವಕ ದುರ್ಭಿಕ್ಷದ ಸಮಯದಲ್ಲಿ ಬಂಗಾಳದ ೧೯ ಜಿಲ್ಲೆಗಳಲ್ಲಿ ೭೫ ಕೇಂದ್ರಗಳನ್ನು ತೆರೆದು, ತನ್ಮೂಲಕ ೧೧೯೬ ಗ್ರಾಮಗಳನ್ನೂ ಹಾಗೂ ೨೨ ನಗರಗಳನ್ನೂ ತೆಗೆದುಕೊಂಡು ಅಲ್ಲಿ ಬಹಳ ಕಾಲದವರೆಗೆ ತಮ್ಮ ಸೇವಾಕಾರ್ಯಗಳನ್ನು ನಡೆಸಿತು.

ಡಿಸೆಂಬರ್ ತಿಂಗಳೂ ಸಹ ಶ್ಯಾಮಲಾತಾಲ್‌ನಲ್ಲೇ ಕಳೆಯಿತು. ೧೯೪೪ರ ಜನವರಿ ೮ನೇ ತೇದಿಯಂದು ಮಹಾರಾಜರು ಬೇಲೂರು ಮಠಕ್ಕೆ ಹೊರಟರು. ರೈಲಿರುವುದು ರಾತ್ರಿಯ ಕೊನೆಯ ಜಾವ. ಸಂಜೆಗೆ ಮೊದಲೇ ದಂಡಿಯಲ್ಲಿ ಕುಳಿತು ಟನಕಪುರವನ್ನು ತಲುಪಿದರು. ನಿಲ್ದಾಣದಲ್ಲಿ ರೈಲಿನಲ್ಲೇ ಮಲಗಿದರು. ಪಿಲಿಭಿತ್ ಜಂಕ್ಷನ್‌ನಲ್ಲಿ ಗಾಡಿಯನ್ನು ಬದಲಿಸಬೇಕು. ಬರೇಲಿಯ ಭಕ್ತರ ಸಂಖ್ಯೆ ಹೆಚ್ಚಿದೆ. ಅವರೆಲ್ಲ ಅಲ್ಲಿಂದ ಪಿಲಿಭಿತ್ ಜಂಕ್ಷನ್ನಿಗೆ ಗುರುದರ್ಶನಕ್ಕಾಗಿ ಬಂದಿದ್ದಾರೆ. ಮಹಾರಾಜರೀಗ ಲಕ್ನೌ ರೈಲನ್ನು ಹತ್ತಿ ಕುಳಿತಿದ್ದಾರೆ. ಗಾರ್ಡಿನ ಸಿಳ್ಳೂ ಹೊಡೆಯಿತು, ಗಾಡಿಯೂ ಸಹ ನಿಧಾನವಾಗಿ ಚಲಿಸಲಾರಂಭಿಸಿತು. ಬರೇಲಿಯ ಯುವ ಭಕ್ತನೊಬ್ಬ ಕಾಗದದಲ್ಲಿ ಸುತ್ತಿದ್ದ ಪೊಟ್ಟಣವನ್ನು ಮಹಾರಾಜರಿಗೆ ಇತ್ತು, 'ಮಹಾರಾಜ್ ಇದನ್ನು ಸ್ವಲ್ಪ ಹಿಡಿಯಿರಿ' ಎಂದ. ಅವರು ಕೈಗೆ ತೆಗೆದುಕೊಂಡ ಕೂಡಲೇ ಮತ್ತೆ ಕೇಳಿ ತೆಗೆದುಕೊಂಡು ಇಳಿಯಲನುವಾದ.

'ಅದರಲ್ಲೇನಿದೆ?' ಮಹಾರಾಜರು ಕೇಳಿದರು.

'ಗೈರಿಕ ವಸ್ತ್ರ ಮತ್ತು ಕೌಪೀನ.'

ಇಷ್ಟರಲ್ಲಿ ರೈಲಿನ ವೇಗ ಹೆಚ್ಚಾಯಿತು. ಆ ಯುವಕನಿಗೆ ಮಹಾರಾಜರು ಏನನ್ನೂ ಹೇಳುವ ಅವಕಾಶವೇ ಸಿಗಲಿಲ್ಲ.

ಆ ಯುವಕನಾದರೋ ವಿವಾಹಿತ. ಮಧ್ಯೆ ಮಧ್ಯೆ ಮರ್ಕಟ ವೈರಾಗ್ಯವು ನೆತ್ತಿಗೇರುತ್ತಿತ್ತು. ಈ ಹಿಂದೆಯೂ ಅನೇಕ ಸಲ ಸಂಸಾರ ತ್ಯಾಗಕ್ಕೆ ಅನುಮತಿಯನ್ನು ಗುರುವಿನಿಂದ ಕೇಳಿದ್ದ. ಪ್ರತಿಸಲವೂ ವಿರಜಾನಂದರು ಅವನನ್ನು ತಡೆದಿದ್ದರು. ಆದ್ದರಿಂದ ಈ ಬಾರಿ ಯುವಕನು ಗುರುವಿನ ಅನುಮತಿಯನ್ನೇ ಕಾಯದೆ, ಬಹಳ ಉಪಾಯವಾಗಿ ಅವರ ಕೈಯಿಂದ ಗೈರಿಕ ವಸನ ಪ್ರಾಪ್ತಿಯ ಹುನ್ನಾರ ಹೂಡಿದ್ದ! ಆದರೆ ಅವನ ಎಣಿಕೆ ತಪ್ಪಾಗಿತ್ತು. ವಿರಜಾನಂದರು ಬೇಲೂರು ಮಠ ತಲುಪಿದ ಮೇಲೆ ಕೆಲದಿನಗಳ ನಂತರ ಆ ಯುವಕನಿಗೆ ಪತ್ರವೊಂದನ್ನು ಬರೆದರು :

''...ಫಿಲಿಭಿತ್ ನಿಲ್ದಾಣದಲ್ಲಿ ನೀನು ಕೊನೆಘಳಿಗೆಯಲ್ಲಿ ನನ್ನ ಕೈಗೆ ಕಾಗದದಲ್ಲಿ ಸುತ್ತಿದ್ದ ಪ್ಯಾಕೆಟ್ ಒಂದನ್ನು ಕೊಟ್ಟು ಮತ್ತದನ್ನು ಕೇಳಿ ಹಿಂದೆ ಪಡೆದೆ. ಅದೇನೆಂದು ಕೇಳಿದ್ದಕ್ಕೆ 'ಗೈರಿಕ ವಸನ ಮತ್ತು ಕೌಪೀನ' ಎಂದುಸುರಿದೆ. ಆಗ ನಾನು ನಿನ್ನನ್ನು ತಡೆಯಲೂ ಸಮಯವಿರಲಿಲ್ಲ ; ರೈಲು ಓಡಲಾರಂಭಿಸಿತ್ತು, ಆಗದನ್ನು ನಾನು ಬಿಸಿ ಕೇಕಿನಂತೆ ನಿನ್ನ ಕೈಗೆ ಎಸೆದುಬಿಟ್ಟೆ. ಹೀಗೆ ನನ್ನನ್ನು ಕಟ್ಟುಬೀಳಿಸಿ, ಬಲವಂತದಿಂದ ಗೈರಿಕವನ್ನು ಧರಿಸಲು ನೀನು ಯೋಗ್ಯನಲ್ಲ. ಅದನ್ನು ನೀನು ಸುತರಾಂ ಧರಿಸಬೇಡ'' ಎಂದು.

ಬೇಲೂರು ಮಠಕ್ಕೆ ಹೋಗುವ ಮಾರ್ಗದಲ್ಲಿ ಈ ಬಾರಿ ಲಕ್ನೌದಲ್ಲಿ ಎರಡು ದಿನಕ್ಕೆಂದು ಇಳಿದುಕೊಂಡಿದ್ದರು. ಹಿಂದಿನ ಸಲದಂತೆ ಈ ಸಲವೂ ಮಹಾರಾಜರ ಭೇಟಿಯ ಅವಕಾಶವನ್ನು ಉಪಯೋಗಿಸಿಕೊಳ್ಳಲು ಭಕ್ತರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು. ಅನೇಕರಿಗೆ ದೀಕ್ಷೆ ನೀಡಿದರು. ಹೋದ ಸಲಕ್ಕಿಂತ ಈ ಸಲದ ಸಂಖ್ಯೆಯು ಹೆಚ್ಚಾಗಿತ್ತು. ಮಠಕ್ಕೆ ಹಿಂತಿರುಗುವಾಗ ಸಾಮಾನ್ಯವಾಗಿ ಕಾಶಿಯಲ್ಲಿ ಇಳಿದುಕೊಳ್ಳುತ್ತಿರಲಿಲ್ಲ. ಈ ಸಲವೂ ಹಾಗೆಯೇ; ಆದ್ದರಿಂದ ಮಠಾಧ್ಯಕ್ಷರ ದರ್ಶನ ಮಾಡಲು ಕಾಶಿಯ ಎರಡೂ ಆಶ್ರಮಗಳಿಂದಲೂ ಸಾಧು-ಬ್ರಹ್ಮಚಾರಿಗಳು ಮತ್ತು ಭಕ್ತರು ಪಂಜಾಬ್ ಮೇಲ್ ಬರುವ ಸಮಯದಲ್ಲಿ ನಿಲ್ದಾಣದಲ್ಲಿ ನೆರೆದಿದ್ದರು. ಮಹಾರಾಜರಿದ್ದ ದ್ವಿತೀಯ ಶ್ರೇಣಿಯ ಬೋಗಿ ಯಲ್ಲಿ ಹತ್ತು ನಿಮಿಷಗಳ ಕುರುಕ್ಷೇತ್ರವೇ ನಡೆದಿತ್ತು. ಪ್ರತಿ ಯೊಬ್ಬರೂ ಪ್ರಣಾಮ ಮಾಡಿ, ಮಹಾರಾಜರೊಂದಿಗೆ ಒಂದೆರಡು ಮಾತನ್ನಾಡಬಯಸುತ್ತಿದ್ದರು. ಅವರ ಕೊರಳಿಗೆ ಹೂವಿನ ಹಾರವನ್ನು ಹಾಕುವ ಆಸೆ ಕೆಲವರಿಗೆ, ಕಿತ್ತಳೆ, ಸೀಬೆ, ಪರಂಗಿ ಅನಾನಸ್, ಬಾಳೆ ಅಲ್ಲದೆ ಸಂದೇಶ, ರಸಗುಲ್ಲ, ಚಮ್‌ಚಮ್ ಮುಂತಾದ ಸಿಹಿಗಳ ನಾನಾ ಆಕಾರದ ಬುಟ್ಟಿ, ಮಡಕೆ, ಗಂಟು ಮೂಟೆಗಳಿಂದ ಅರ್ಧ ಬೋಗಿಯು ತುಂಬಿಹೋಯಿತು. ಆಗ ಮಾಗಿಯ ಚಳಿಯಿದ್ದರೂ ಮಹಾರಾಜರು ಬೆವೆತರು. ಬೋಗಿಯ ಬಾಗಿಲಲ್ಲಿ ನಿಂತಿದ್ದ ಕಾಶಿಯ

ನಾಲ್ವರು ಬಲಿಷ್ಠ ಸಂನ್ಯಾಸಿಗಳ ತಲೆಯು ಈ ಗಲಾಟೆಯಲ್ಲಿ ಬಿಸಿಯೇರಿ, ಕೂಗಾಡುತ್ತ ಎಲ್ಲರನ್ನೂ ಗದರಿಸುತ್ತಿದ್ದರು!

ಗಾಡಿಯು ಹೊರಡುತ್ತಿದ್ದಂತೆಯೇ ವಿರಜಾನಂದರಿಗೆ ತುಂಬ ಕಸಿವಿಸಿಯಾಗತೊಡಗಿತು; ಅವರದ್ದು ಒಂದೇ ಒಂದು ಬರ್ತ್ ಸೀಟು, ಆದರೆ ಇಡೀ ಬೋಗಿಯೇ ಇವರಿಗೆ ದೊರೆತ ವಿವಿಧ ಕಾಣಿಕೆಗಳಿಂದ ತುಂಬಿ ಹೋಗಿದೆ, ಸಹಯಾತ್ರಿಕರಿಗೆ ಇದರಿಂದಾಗಿ ಅದೆಷ್ಟೊಂದು ತೊಂದರೆಯಾಗಿದೆಯೋ ಏನೋ. ''ಬೇಗ ಬೇಗ ಎಲ್ಲ ಸ್ವಚ್ಛಗೊಳಿಸಿ, ಸಾಮಾನುಗಳನ್ನು ಜೋಡಿಸಿಡಿ'' ಎಂದು ತಮ್ಮ ಸೇವಕರಿಗೆ ಹೇಳುತ್ತಿದ್ದಾರೆ. ಇಷ್ಟೊಂದು ಗೌರವಕ್ಕೆ ಪಾತ್ರರಾದ ಸಂನ್ಯಾಸಿ ಪ್ರಯಾಣಿಕರ ನಿಷ್ಕಾಪಟ್ಯ ಸೌಜನ್ಯತೆಯನ್ನು ಕಂಡ ಸಹಯಾತ್ರಿಕರು ಮಂತ್ರಮುಗ್ಧರಾದರು. 'ಇಲ್ಲ, ಇಲ್ಲ, ಸ್ವಾಮೀಜಿ, ನಮಗೆ ಏನೂ ತೊಂದರೆಯಾಗುತ್ತಿಲ್ಲ , ನೀವೇನೂ ಚಿಂತಿಸಬೇಡಿ' ಎನ್ನುತ್ತಿದ್ದಾರೆ.

೧೯೪೪ರ ಜನವರಿ ೧೨ರಂದು ಪಾಟ್ನಾಗೆ ಹೋಗಿ ಅಲ್ಲಿ ಎರಡು ದಿನ ತಂಗುವ ಕಾರ್ಯಕ್ರಮ. ಎರಡು ದಿನವೂ ದೀಕ್ಷೆ ನೀಡಿದರು. ಭಕ್ತರೊಂದಿಗೆ ಮಾತುಕತೆ ಪ್ರಶ್ನೋತ್ತರ ಎಲ್ಲವೂ ಯಥಾರೀತಿ ನಡೆದವು. ಮಠಾಧ್ಯಕ್ಷರಾದ ನಂತರ ಇವರು ಬರುತ್ತಿರುವುದು ಇದು ಮೂರನೇ ಬಾರಿ.

ಜನವರಿ ೧೪ರಂದು ಮಹಾರಾಜರು ಬೇಲೂರು ಮಠ ತಲುಪಿದರು. ಪೂರ್ವವಂಗದ ಕೆಲವು ಕೇಂದ್ರಗಳು, ವಿಶೇಷವಾಗಿ ಶ್ರೀಹಟ್ಟಾ ಆಶ್ರಮದವರು'ಮಹಾರಾಜ್ ಒಮ್ಮೆ ಈ ಕಡೆ ಬನ್ನಿ' ಎಂದು ಮತ್ತೆ ಮತ್ತೆ ಕೋರಿಕೊಳ್ಳುತ್ತಿದ್ದಾರೆ. ೧೯೧೮ರಲ್ಲಿ ಒಮ್ಮೆ ಸ್ವಾಮೀಜಿಯವರ ಆದೇಶದ ಮೇರೆಗೆ ವಿರಜಾನಂದರು ಪ್ರಚಾರ ಕಾರ್ಯಕ್ಕೆಂದು ಪೂರ್ವವಂಗಕ್ಕೆ ಹೋಗಿದ್ದರು. ಅದೆಲ್ಲ ಈಗ ನೆನಪಾಗತೊಡಗಿತು. ಅಲ್ಲಿಯ ಕ್ಷೇತ್ರವು ಶ್ರೀರಾಮಕೃಷ್ಣ-ವಿವೇಕಾನಂದರ ಆದರ್ಶಗಳನ್ನು ಗ್ರಹಿಸಲು ಅತಿಶಯವಾಗಿ ಫಲವತ್ತಾಗಿದೆ. ಸ್ವಯಂ ವಿವೇಕಾನಂದರಿಂದ ಆರಂಭಗೊಂಡು ರಾಮಕೃಷ್ಣರ ಅನೇಕ ಶಿಷ್ಯರು ಪೂರ್ವವಂಗಕ್ಕೆ ಹೋಗಿ ರಾಮಕೃಷ್ಣ ಭಾವಧಾರೆಯನ್ನು ಪುಷ್ಟಿಗೊಳಿಸಿ ಬಂದಿದ್ದಾರೆ. ಆ ಪ್ರದೇಶದಿಂದ ಬಂದು ಸಂಘಕ್ಕೆ ಸೇರಿರುವ ಅನೇಕರು ಸಂಘದ ಬಲವನ್ನು ಹೆಚ್ಚಿಸುತ್ತ ಹೋಗಿದ್ದಾರೆ. ಹೀಗಾಗಿ ಅಲ್ಲಿಯ ಆಹ್ವಾನಕ್ಕೆ ಓಗೊಡುವುದು ಸೂಕ್ತವೇ ಎಂದೆನಿಸಿತು. ಆದರೆ ಒಂದೇ ದೊಡ್ಡ ತೊಂದರೆಯೆಂದರೆ ವ್ಯಾಧಿಗ್ರಸ್ತವಾದ ವೃದ್ಧ ಶರೀರ. Spirit is willing but flesh is weak (ಅಂತರ್ಯದಲ್ಲಿ ಇಚ್ಛೆ ಇದೆ, ಆದರೆ ಶರೀರವು ದುರ್ಬಲ). ವೈದ್ಯರ ಸಲಹೆ ಕೇಳಿದಾಗ ಅವರು ಬೇಡವೆನ್ನುತ್ತಾರೆ ಎಂಬುದೂ ವಿದಿತವೇ. ಮಠದ ಹಿರಿಯರು ಮಹಾರಾಜರ ಈಗಿನ ಆರೋಗ್ಯ ಸ್ಥಿತಿಯನ್ನೂ, ಯುದ್ಧದ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಪರಿಸ್ಥಿತಿಯನ್ನು ನೆನೆದು, ಅವರು ಪೂರ್ವವಂಗಕ್ಕೆ ಪ್ರಯಾಣ ಕೈಗೊಳ್ಳುವುದು ಉಚಿತವೆಂದೆನಿಸಲಿಲ್ಲ. ಹೀಗಿದ್ದರೂ ಮಹಾರಾಜರು, ''ಮಠದಿಂದ ಶ್ಯಾಮಲಾ ತಾಲ್‌ಗೆ ಹಿಂದಿರುಗಿ ಕೆಲವು ತಿಂಗಳು ವಿಶ್ರಾಂತಿ ಪಡೆದು, ಶರೀರವು ಸುಧಾರಿಸಿದರೆ ಅಲ್ಲಿಗೆ ಬರುವ ಪ್ರಯತ್ನ ಮಾಡುವೆ'' ಎಂದು ಪತ್ರ ಬರೆದರು.

* * *

ಬೇಲೂರು ಮಠದಲ್ಲಿ ಇರುವಷ್ಟು ದಿನವೂ ನಾನಾ ವ್ಯಕ್ತಿಗಳ ಅನೇಕಾನೇಕ ಬಾಧ್ಯತೆಗಳನ್ನು ಪೂರೈಸಬೇಕು. ಮಹಾರಾಜರ ಅಸ್ವಸ್ಥತೆಗೆ ವೈದ್ಯರು ಯಾವ ಪಥ್ಯ ನಿಯಮ ಹೇಳಿದ್ದರೋ ಅದನ್ನು ಯಥಾವತ್ತಾಗಿ ಪಾಲಿಸಲಾಗುತ್ತಿಲ್ಲ. ದೀಕ್ಷಾರ್ಥಿಗಳ ಸಂಖ್ಯೆ ದಿನದಿನಕ್ಕೂ ವೃದ್ಧಿಯಾಗುತ್ತಲೇ ಇದೆ. ದೀಕ್ಷೆಗಾಗಿ ದಿನದಲ್ಲಿ ಮೂರು ಗಂಟೆಗಳ ಕಾಲ ಕಳೆಯುತ್ತಿತ್ತು. ಮಧ್ಯಾಹ್ನ ಊಟ ಮುಗಿಸಿ ವಿಶ್ರಮಿಸಲು ಹೋಗುವ ಹೊತ್ತಿಗೆ ಎಷ್ಟೋ ದಿನಗಳು ಮೂರು ಗಂಟೆಯೇ ಆಗಿಬಿಟ್ಟಿರುತ್ತದೆ. ಅಷ್ಟರಲ್ಲೇ ಒಮ್ಮೊಮ್ಮೆ ಮಹಿಳಾಭಕ್ತರು ಸಹ ಬಂದುಬಿಡುತ್ತಾರೆ.

''ಸಂಜೆ ೪ರೊಳಗೆ ನಾನು ಮನೆಗೆ ಹಿಂತಿರುಗಬೇಕು. ಮನೆಗೆಲಸದಿಂದ ಈ ಮಧ್ಯಾಹ್ನದ ಸಮಯದಲ್ಲಿ ಮಾತ್ರವೇ ಸ್ವಲ್ಪ ಬಿಡುವು. ದಯವಿಟ್ಟು ಮಹಾರಾಜರನ್ನೊಮ್ಮೆ ನೋಡಲು ಬಿಡಿ'' ಎಂಬುದು ಭಕ್ತೆಯ ಅಂಬೋಣ.

''ಮಧ್ಯಾಹ್ನ ಎರಡು ಗಂಟೆಯವರೆಗೆ ದೀಕ್ಷೆ ಕೊಟ್ಟು, ಊಟ ಮಾಡಿ ಈಗಷ್ಟೆ ಕುಳಿತು ಸ್ವಲ್ಪ ವೃತ್ತಪತ್ರಿಕೆ ಓದುತ್ತಿದ್ದಾರೆ. ಇಷ್ಟರಲ್ಲೇ ಮಲಗಲು ಹೋಗುತ್ತಾರೆ. ಹೇಗೆ ತಾನೇ ಅವರಿಗೀಗ ದರ್ಶನ ನೀಡಲು ಹೇಳಲಿ? ಅವರ ಶರೀರ ಎಷ್ಟು ಅಸ್ವಸ್ಥಗೊಂಡಿದೆಯೆಂದು ಗೊತ್ತಿದೆಯಷ್ಟೇ ತಾಯಿ?'' ಎಂದರು ಸೇವಕರು.

''ಹೌದು ಗೊತ್ತಿದೆ. ಆದರೆ ನನಗೂ ಬೇರೆ ದಾರಿಯಿಲ್ಲ. ಬೇರೆ ಸಮಯದಲ್ಲಿ ಬರುವುದು ನನ್ನಿಂದ ಅಸಾಧ್ಯ. ದಯವಿಟ್ಟು ಒಮ್ಮೆ ಹೋಗಿ ಮಹಾರಾಜರಿಗೆ ನನ್ನ ಬಗ್ಗೆ ತಿಳಿಸಿ. ಅವರನ್ನು ಕಾಣುವುದು ತೀರ ಅವಶ್ಯವಿದೆ. ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.''

ಸರಿ ಸೇವಕರು ಸಂಕೋಚದಿಂದ ವಿಷಯ ತಿಳಿಸಿದರು. ಮಹಾರಾಜರು 'ಕರೆದುಕೊಂಡು ಬಾ' ಎಂದರು. ಮಹಿಳೆಯು ಬಂದು ನೋಡುತ್ತಾರೆ, ಮಹಾರಾಜರ ಮುಖದಲ್ಲಿ ಸ್ವಲ್ಪವಾದರೂ ಬೇಜಾರಿಲ್ಲ. ಬಹಳ ಸ್ನೇಹದಿಂದ ಹತ್ತಿರ ಕೂರಿಸಿ, ಹರಸಿದರು. ಸಂಸಾರದಲ್ಲಿ ಪೆಟ್ಟುಗಳನ್ನು ತಿಂದು ಜರ್ಜರಿತವಾಗಿದ್ದ ಆ ಪ್ರಾಣಕ್ಕೆ ಶಾಂತಿಯ ತಂಪನ್ನೆರೆದರು.

ಸಂಜೆ ೪.೩೦ರ ಹೊತ್ತಿಗೆ ಮತ್ತೆ ಯಾರಾದರೂ ಬಂದೇ ಬರುತ್ತಾರೆ. ದೆಹಲಿಯ ಭಕ್ತನೊಬ್ಬ , ಆಫೀಸಿನ ಕೆಲಸಕ್ಕಾಗಿ ಕಲ್ಕತ್ತೆಗೆ ಬಂದಿದ್ದಾನೆ, ಇಂದೇ ಸಂಜೆಯ ರೈಲು ಹಿಡಿಯಬೇಕು, ಸ್ವಲ್ಪ ಸಮಯ ಸಿಕ್ಕಿತಾದ್ದರಿಂದ ಬೇಲೂರು ಮಠಕ್ಕೆ ಬಂದಿದ್ದಾನೆ. ಮಹಾರಾಜರು ೫.೩೦ಕ್ಕೆ ದರ್ಶನವೀಯುವರು. ಆದರೆ ಅಲ್ಲಿಯವರೆಗೆ ಕಾದರೆ ರೈಲು ತಪ್ಪುವುದು, ಆದ್ದರಿಂದ ಈಗಲೇ ಮಹಾರಾಜರ ದರ್ಶನ ಮಾಡಬೇಕು.

**ಸೇವಕ:** ಮೂರು ಗಂಟೆಗಷ್ಟೆ ಮಹಾರಾಜರು ವಿಶ್ರಮಿಸಲು ತೆರಳಿ, ಈಗಷ್ಟೆ ಎದ್ದಿದ್ದಾರೆ; ಸ್ವಲ್ಪ ಕೈಕಾಲು ತೊಳೆದು, ಚಹಾ ಕುಡಿದು ಬರುತ್ತಾರೆ, ಒಂದರ್ಧ ಗಂಟೆ ಕಾಯಿರಪ್ಪ.

**ಭಕ್ತ:** ಇಲ್ಲ, ಹಾಗೆ ಮಾಡಿದರೆ ಗಾಡಿಯನ್ನು ಹಿಡಿಯಲಾಗುವುದಿಲ್ಲ. ದಯವಿಟ್ಟು ಸ್ವಲ್ಪ ಅವಕಾಶ ಮಾಡಿಕೊಡಿ.

ಸೇವಕ ಕೊಠಡಿಗೆ ನುಗ್ಗಿದ. ''ಮಹಾರಾಜ್, ಆತ ಹೇಗೆ ಪಟ್ಟು ಹಿಡಿದಿದ್ದಾನೆ ನೋಡಿ. ''

''ಪಾಪ! ಇನ್ನೇನು ತಾನೇ ಮಾಡಿಯಾನು? ಇಂದೇ ಹಿಂದಿರುಗಬೇಕಲ್ಲ. ಕರೆದುಬಿಡು, ಅವನೊಂದಿಗೆ ಮಾತನಾಡಿ ನಂತರ ಮುಂದಿನ ಕೆಲಸ ಮಾಡಿದರಾಯಿತು'' ಎಂದರು ಮಹಾರಾಜ್.

ಸರಿ ಒಳಗೆ ಬಿಡಲಾಯಿತು. ಒಳಗೆ ಹೋದ ಮನುಷ್ಯನಿಗೆ ರೈಲು ಹಿಡಿಯುವ ಆತುರ ಎಲ್ಲೋ ಮಾಯವೇ ಆದಂತಾಯಿತು. ವಿರಜಾನಂದರ ಪದತಲದಲ್ಲಿ ಕುಳಿತು ಅವರ ಪಾದವನ್ನೊತ್ತುವುದಕ್ಕೆ ಆರಂಭಿಸಿಬಿಟ್ಟಿದ್ದಾನೆ. ಸೇವಕನೀಗ ಪೇಚಿಗೆ ಸಿಲುಕಿದ. ಮಹಾರಾಜರನ್ನು ಬೇಗಬೇಗ ೫ ಗಂಟೆಯ ಹೊತ್ತಿಗೆ ಎಲ್ಲರ ದರ್ಶನಕ್ಕಾಗಿ ಸಿದ್ಧಪಡಿಸಬೇಕು. ಆದರೆ ಮಹಾರಾಜರೇನೋ ನಿಶ್ಚಿಂತರಾಗಿದ್ದಾರೆ. ತಮಗೂ ಏನೂ ಕೆಲಸವಿಲ್ಲ, ಭಕ್ತನೂ ಇಂದು ರೈಲು ಹಿಡಿಯಬೇಕಾಗಿಲ್ಲ ಎಂಬಂತೆ!

ಸಂಜೆ ಜನಸಾಮಾನ್ಯರೊಡನೆ ಭೇಟಿ ನಡೆಯುತ್ತಿದೆ. ತುಂಬ ಜನರ ಸಂದಣಿ, ಸಮಯವಾದರೋ ಸ್ವಲ್ಪ. ಅಷ್ಟರಲ್ಲೇ ನಾಲ್ವರು ಮರಾಠಿ ಯುವಕರು ಬಂದು ಸ್ವಲ್ಪಹೊತ್ತು ಪ್ರೆಸಿಡೆಂಟರ ಹತ್ತಿರ ಮಾತನಾಡಬೇಕು ಎಂದು ಹಠ ಹಿಡಿದಿದ್ದಾರೆ. ಅವರೆಲ್ಲ ಕಲ್ಕತ್ತೆ ನೋಡಲು ಬಂದವರಂತೆ. ರಾಮಕೃಷ್ಣ ಮಿಷನ್ನಿನ ಹೆಸರು ಕೇಳಿದ್ದಾರೆ, ಮಂದಿರವನ್ನು ಸುತ್ತು ಹೊಡೆದು ನೋಡಿದ್ದಾಗಿದೆ, ಈಗ ಇದೊಂದೇ ಬಾಕಿ. ಮಹಾರಾಜರು ''ಕರೆ ಅವರನ್ನು'' ಎಂದರು. ಒಂದು ಪ್ರಶ್ನೆ ಕೇಳಿ ಸುಮ್ಮನಾಗುವವರಲ್ಲ ಆ ಯುವಕರು; ಹೊರಗೆ ಎಷ್ಟೊಂದು ಜನ ಕಾಯುತ್ತಿದ್ದಾರೆಂಬ ಪರಿವೆಯೂ ಅವರಿಗಿಲ್ಲ. ವಿರಜಾನಂದರೂ ಸಹ ಅವರೊಂದಿಗೆ ನಿಶ್ಚಿಂತರಾಗಿ ೧೫ ನಿಮಿಷಗಳ ಕಾಲ ಮಾತನಾಡುತ್ತಲೇ ಇದ್ದಾರೆ. ಹೀಗೆಯೇ ಕಳೆಯುತ್ತಿವೆ ದಿನಗಳು. ಇದರಿಂದಾಗಿ ಸುಸ್ತಾಗುವುದು ಸ್ವಾಭಾವಿಕವೇ. ಆದರೂ ಅವರ ಸಾನ್ನಿಧ್ಯಕ್ಕೆ ಬಂದವರಿಗೆ ಅದರ ಸುಳಿವೂ ಸಿಗದು. ಅವರೆಲ್ಲ , 'ಈ ಮಹಾಪುರುಷನದೆಷ್ಟು ಶಾಂತ' ಎಂಬ ಭಾವನೆಯನ್ನಿಟ್ಟುಕೊಂಡು ತೆರಳುತ್ತಿದ್ದರು. ಯಾರು ಅನವರತ ಅವರ ಸಾನ್ನಿಧ್ಯದಲ್ಲಿರುತ್ತಿದ್ದರೋ ಅವರು ಮಾತ್ರ 'ನಿಜವಾಗಿಯೂ ಇವರ ಸಹನೆ ಅಪರಿಮಿತ' ಎಂದುಕೊಳ್ಳುತ್ತಿದ್ದರು.

ಕೇವಲ ಸಹನೆಯಷ್ಟೇ ಅಲ್ಲ, ಏಕಾಗ್ರತೆಯೂ ಕೂಡ. ಪತ್ರಗಳಿಗೆ ಸಹಿ ಮಾಡಲು ಕುಳಿತಿದ್ದಾರೆ. ಅವರು ಹೇಳಿದಂತೆ ಸೇವಕರು ಪತ್ರ ಬರೆದಿದ್ದಾರೆ, ಇವರು ಸಹಿ ಮಾಡುತ್ತಾರೆ. ಆದರೆ ಓದದೇ ಸಹಿ ಮಾಡುವುದಾದರೂ ಹೇಗೆ? ಸುಮ್ಮನೆ ಓದಿಕೊಂಡು ಹೋದರೂ ಸಾಲದು, ತಮ್ಮ ಮನೋಭಾವವು ಭಾಷೆಯಲ್ಲಿ ಸರಿಯಾಗಿ ಅಭಿವ್ಯಕ್ತಗೊಂಡಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಕೂಲಂಕಷವಾಗಿಯೇ ಓದಬೇಕು. ಹೀಗಾಗಿ ಒಮ್ಮೊಮ್ಮೆ ಒಂದು ಪತ್ರಕ್ಕೆ ಸಹಿ ಮಾಡಲು ಹದಿನೈದು ನಿಮಿಷಗಳೇ ಕಳೆದು ಹೋಗುತ್ತಿದ್ದವು. ಬೇಲೂರು ಮಠದಲ್ಲಿದ್ದಾಗ ಪತ್ರಗಳನ್ನೋದಲು ಎರಡು ಗಂಟೆಗಳ ಕಾಲ ತಗುಲುತ್ತಿತ್ತು. ಶ್ಯಾಮಲಾತಾಲ್‌ನಲ್ಲಿದ್ದಾಗ ಮತ್ತೂ ಹೆಚ್ಚು. ಪರಿಮಾಣದ ಕಡೆಯಿಂದ ಕೆಲಸವು ಕಡಿಮೆಯಾದರೂ, ಗುಣಮಟ್ಟದ ಕಡೆಯಿಂದ ತುಂಬ ಹೇರಳ. ಈ ಕಾರಣಕ್ಕಾಗಿ 'ಗಾಡಿಗಟ್ಟಲೆ ಗಳಹುವುದರಿಂದ ಯಾವ ಪ್ರಯೋಜನವೂ ಇಲ್ಲ; ಯೋಗ್ಯ ಜಿಜ್ಞಾಸುವಿಗೆ ಕೆಲಸಕ್ಕೆ ಬರುವ ಒಂದೆರಡು ಉಪದೇಶ ಕೊಟ್ಟರೆ ಅಷ್ಟೇ ಸಾಕು' ಎನ್ನುತ್ತಿದ್ದರು. ಯಾರು ಮಹಾರಾಜರ 'ಮಾತ'ನ್ನಷ್ಟೆ ಕೇಳಲು ಬರುತ್ತಿದ್ದರೋ ಅವರು ನಿರಾಶರಾಗುತ್ತಿದ್ದರು. ಯಾರು ಅವರಿಂದ ಆಂತರಿಕತೆಯನ್ನು ಬಯಸುತ್ತಿದ್ದರೋ ಅವರಿಗದು ಸ್ನೇಹಭರಿತ ಪ್ರಸನ್ನ ದೃಷ್ಟಿಯಿಂದಲೋ, ಸಾಮಾನ್ಯವಾದ ಕುಶಲ ಪ್ರಶ್ನೆಯಿಂದಲೋ, ಸಂಕ್ಷಿಪ್ತ ಶುಭೇಚ್ಛೆಯಿಂದಲೋ ಲಭಿಸುತ್ತಿತ್ತು. ಇದರಿಂದ ಅವರ ಹೃದಯ ತುಂಬಿಬರುತ್ತಿತ್ತು. ಅವರಿಗಾದರೋ, 'ವ್ಯಾಧಿಗ್ರಸ್ತರಾದ ಮಹಾರಾಜರಿಂದ ಇನ್ನೂ ಹೆಚ್ಚು ಮಾತು ಕೇಳಿ ಏನಾಗಬೇಕಾಗಿದೆ? ಅವರು ಹೇಳಿದಷ್ಟನ್ನು ಪಾಲಿಸಿದರೆ ಅಷ್ಟೇ ಸಾಕು' ಎನ್ನುವ ಮನೋಭಾವವಿತ್ತು.

ವಸುಮತಿ ಮುದ್ರಣಾಲಯದ ಮಾಲೀಕರೂ, ಮಠದ ಏಕನಿಷ್ಠ ಭಕ್ತರೂ ಆದ ಸತೀಶಚಂದ್ರ ಮುಖ್ಯೋಪಾಧ್ಯಾಯರು ಕಠಿಣ ವ್ಯಾಧಿಗೆ ತುತ್ತಾಗಿ ಹಾಸಿಗೆ ಹಿಡಿದಿದ್ದರು. ಅಲ್ಲದೇ ಅವರ ೨೪ ವರ್ಷದ ಒಬ್ಬನೇ ಸತ್ಪುತ್ರನು ಕೆಲವು ದಿನಗಳ ಹಿಂದಷ್ಟೇ ತೀರಿಕೊಂಡಿದ್ದರಿಂದ ಅವರು ತುಂಬ ಮನನೊಂದಿದ್ದರು. ವಿರಜಾನಂದರು ಒಂದು ಸಂಜೆ ಅವರನ್ನು ನೋಡಲು ಹೋಗಿದ್ದು, ಸಮಯೋಚಿತವಾದ ಸಾಂತ್ವನ ನೀಡಿ ಬಂದಿದ್ದರು.[೧]

ಕೊಲ್ಕತ್ತಾದ ನಲಿನ್ ನಿಮಾಯ್ ಸ್ಟ್ರೀಟ್‌ನಲ್ಲಿದ್ದ ಮಿಷನ್ನಿನ ಸಂಸ್ಥೆಯು ಸ್ವಾಮಿ ಪುಣ್ಯಾನಂದರ ನೇತೃತ್ವದಲ್ಲಿ, ಬರಗಾಲದಲ್ಲಿ ತಾಯ್ತಂದೆಗಳನ್ನು ಕಳೆದುಕೊಂಡ ಕೆಲವು ಅನಾಥ ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ಹೊತ್ತಿತ್ತು. ವಿರಜಾನಂದರು ಶ್ಯಾಮಲಾತಾಲ್‌ಗೆ ಹೋಗುವ ಮೊದಲೊಂದು ದಿನ ಆ ಸಂಸ್ಥೆಯನ್ನು ನೋಡಿಕೊಂಡು ಬಂದರು. ಮತ್ತೊಂದು ದಿನ ಶಿವಪುರದ

---

೧ ಸತೀಶ್ ಬಾಬುಗಳು ಆ ರೋಗಶಯ್ಯೆಯಿಂದ ಮೇಲೇಳಲಾಗಲಿಲ್ಲ. ಕೆಲವುದಿನಗಳಲ್ಲಿಯೇ ಅವರು ದಿವಂಗತರಾದರು. ಅವರ ಸಾಧ್ವಿ ಸಹಧರ್ಮಿಣಿಯು ದಿವಂಗತರಾದ ತಮ್ಮ ಪತಿ ಮತ್ತು ಮಕ್ಕಳ ನೆನಪಿಗಾಗಿ ರಾಮಕೃಷ್ಣ ಮಿಷನ್ನಿಗೆ ಮೂರು ಲಕ್ಷ ರೂ.ಗಳ ಕಂಪನಿಯ ಕಾಗದವನ್ನೂ,

ಭಕ್ತರೊಬ್ಬರ ಮನೆಯಲ್ಲಿ ಹೌರಾ ಸಮಾಜದವರು ಅಭಿನಯಿಸಿದ್ದ 'ನದಿಯಾದ ನಿಮಾಯಿ' ಎಂಬ ಗೀತ ನಾಟಕವನ್ನು ಕೆಲವು ಸಾಧುಗಳೊಡಗೂಡಿ ನೋಡಿ ಬಂದರು. ೨

೧೯೪೪ರ ಮಾರ್ಚ್ ೨೯ರಂದು ಮಹಾರಾಜರು ಶ್ಯಾಮಲಾತಾಲ್‌ಗೆ ಹೊರಡುವ ಮಾರ್ಗವಾಗಿ ಕಾಶಿಗೆ ಹೋಗಿ ಐದು ದಿನಗಳಿದ್ದರು. ೬೨ ಭಕ್ತರಿಗೆ ದೀಕ್ಷೆಯನ್ನೂ ನೀಡಿದರು. ಲಕ್ನೌದಲ್ಲಿ ಒಂದು ದಿನದ ಮಟ್ಟಿಗೆ ಇಳಿದುಕೊಂಡರು. ಅಲ್ಲಿಯೂ ದೀಕ್ಷಾರ್ಥಿಗಳ ಆಕಾಂಕ್ಷೆಯನ್ನು ಪೂರೈಸಿದರು. ಏಪ್ರಿಲ್ ೬ರಂದು ಶ್ಯಾಮಲಾತಾಲ್ ತಲುಪಿದರು.

ನಿರ್ದಿಷ್ಟ ಸಮಯಕ್ಕೆ ಮೊದಲೇ ಪರ್ವತಕ್ಕೆ ಬಂದುಬಿಟ್ಟಿದ್ದಾರೆ; ತುಂಬ ಚಳಿ ಇದೆ. ಗೋಧಿಯ ಗದ್ದೆಯಲ್ಲಿ ತೆನೆದುಂಬಿದೆ. ಸೇಬಿನ ಮರದಲ್ಲಿ ಹೂಬಿಟ್ಟಿವೆ. ರೋಡೋಡೆಂಡ್ರನ್ನಿನ ಕಡುಗೆಂಪು ಛಾಯೆ ಇನ್ನೂ ಮಾಯವಾಗಿರಲಿಲ್ಲ. ಮಹಾರಾಜರ ಸೇವೆ ಗೈಯ್ಯುತ್ತಿದ್ದ ಬ್ರಹ್ಮಚಾರಿಯು ಈ ಬಾರಿ ಸಂನ್ಯಾಸ ಪಡೆದು ಕೆಲಕಾಲ ತಪಸ್ಯೆಗೆಂದು ಹೋಗಿದ್ದರು. ಆದ್ದರಿಂದ ಹೊಸ ಬ್ರಹ್ಮಚಾರಿಯೊಬ್ಬನನ್ನು ಮಹಾರಾಜರು ತಮ್ಮೊಡನೆ ಕರೆತಂದಿದ್ದಾರೆ. ಬೇಲೂರು ಮಠದಲ್ಲಿ ಈತ ಸ್ವಲ್ಪ ಸಮಯ ಮಹಾರಾಜರ ಸೇವೆ ಮಾಡಿದ್ದ. ಆದರೆ ಶ್ಯಾಮಲಾತಾಲ್‌ನಲ್ಲಿ ಕೆಲಸದ ಪರಿಧಿ ಎಷ್ಟು ವಿಸ್ತಾರವಾಗಿರಬಹುದು ಎಂಬುದು ಅವನ ಕಲ್ಪನೆಗೆ ಬಂದಿರಲಿಲ್ಲ. ಈಗ ಏದುಸಿರು ಬರುವಂತಾಗಿದೆ. ಮಹಾರಾಜರು ಮಂದಸ್ಮಿತರಾಗಿ ಆ ಹುಡುಗನ ತಪ್ಪು ಒಪ್ಪುಗಳನ್ನು ಸುಧಾರಿಸಿ ಅವನನ್ನು ಎರಕಕ್ಕೆ ಹೊಯ್ಯುತ್ತಿದ್ದಾರೆ.

ಕೆಲವು ದಿನಗಳಲ್ಲಿಯೇ ಮತ್ತೊಬ್ಬ ಬ್ರಹ್ಮಚಾರಿಯೂ ಸಹ ವಿರಜಾನಂದರ ಸೇವೆಗೆಂದು ಶ್ಯಾಮಲಾತಾಲ್‌ಗೆ ಬಂದಿಳಿದರು. ಮಹಾರಾಜರ ಸೇವೆಗೈಯಬೇಕೆಂಬುದು ಅವನ ಅನೇಕ ದಿನಗಳ ಆಕಾಂಕ್ಷೆಯಾಗಿದ್ದಿತು. ಕಳೆದ ವರ್ಷವೂ ಸಹ ಅವನು ಕೆಲವು ವಾರ ಇಲ್ಲಿಗೆ ಬಂದಿದ್ದನು. ಅವನ ಕಾರ್ಯತತ್ಪರತೆಯನ್ನೂ ವಿಧೇಯತೆಯನ್ನೂ ನಿಃಸ್ವಾರ್ಥ ಸೇವೆಯನ್ನೂ ಕಂಡು ವಿರಜಾನಂದರಿಗೆ ಬಹಳ ಮೆಚ್ಚುಗೆಯಾಗಿತ್ತು. ಆತನಿಗಿನ್ನೂ ಬ್ರಹ್ಮಚರ್ಯ ವ್ರತದ ದೀಕ್ಷೆಯಾಗಿರಲಿಲ್ಲ; ತಾನಿದ್ದ ಆಶ್ರಮದಿಂದ ಮಹಾರಾಜರಿಗೆ ಪತ್ರ ಬರೆದು, ಬ್ರಹ್ಮಚಾರಿಗಳ ಉಡುಪನ್ನು ಧರಿಸಲು ಅನುಮತಿಯನ್ನು ಪ್ರಾರ್ಥಿಸಿದ್ದನು. ಮಹಾರಾಜರು ಅದಕ್ಕೆ, 'ಸದ್ಯಕ್ಕೆ ಈಗಿರುವಂತೆಯೇ ಇರು, ಸಮಯ ಬಂದಾಗ ನಾನೇ ನಿನಗೆ ತಿಳಿಸುವೆ' ಎಂದು ಪತ್ರ ಬರೆದಿದ್ದರು. ಆಶ್ಚರ್ಯವೆಂದರೆ, ವಿರಜಾನಂದರು ತಮ್ಮ ನೂರಾರು ಕೆಲಸಗಳ ನಡುವೆಯೂ ಹುಡುಗ ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ರಾಮಕೃಷ್ಣ ಜಯಂತಿಯ ಮೊದಲು ಅವನಿಗೆ 'ರಾಮಕೃಷ್ಣರ ಪುಣ್ಯ ಜನ್ಮತಿಥಿಯಂದು ನೀನು ಹೊಸ ಧೋತರವನ್ನು ಅರ್ಧ ಮಾಡಿ, ಬ್ರಹ್ಮಚಾರಿಗಳಂತೆ ಉಡು' ಎಂದು ಬರೆದಿದ್ದರು. ಆ ಪತ್ರವನ್ನು ಓದಿದ ಆ ಬ್ರಹ್ಮ ಚಾರಿಯು 'ಹೌದಲ್ಲ! ನನ್ನ ಈ ಚಿಕ್ಕ ಪ್ರಾರ್ಥನೆಯನ್ನು ಮಹಾರಾಜರು ಮರೆತಿಲ್ಲವಲ್ಲ!' ಎಂದು ಆನಂದದಿಂದ ಉಬ್ಬಿದ್ದನು. ಆದ್ದರಿಂದ ಸಂಘಗುರುವಿಗೆ ಸೇವೆ ಸಲ್ಲಿಸುವುದರ ಮೂಲಕ ತನ್ನ ಕೃತಜ್ಞತೆಯನ್ನು ತೋರುವ ಸಲುವಾಗಿ ಶ್ಯಾಮಲಾತಾಲ್‌ಗೆ ಬಂದುಬಿಟ್ಟಿದ್ದಾನೆ.



* * *

ಕುಲುಕಿಸಿ—ಚೆನ್ನಾಗಿ ಕುಲುಕಿಸಿ—ಇನ್ನೂ ಚೆನ್ನಾಗಿ.... ಹೀಗೆ ಮಹಾರಾಜರು ತಮ್ಮ ಸೇವಕರಿಬ್ಬರಿಗೆ ಮರದ ಪೆಟ್ಟಿಗೆಯೊಂದನ್ನು ಚೆನ್ನಾಗಿ ಕುಲುಕಿಸಲು ಹೇಳುತ್ತಿದ್ದಾರೆ. ಅದರಲ್ಲಿ ಆಶ್ರಮದಲ್ಲೇ ಬೆಳೆದ ಕೆಲವು ತರಕಾರಿ, ಹಣ್ಣು , ನಿಂಬೆ, ಮೂಸಂಬಿ, ಸೀಮೆ ಬದನೆ ಇತ್ಯಾದಿಗಳಿದ್ದವು. ಇದನ್ನೆಲ್ಲ ಬೇಲೂರು ಮಠಕ್ಕೆ ಪಾರ್ಸೆಲ್ ಮಾಡಲಾಗುತ್ತಿದೆ. ಪೆಟ್ಟಿಗೆಯನ್ನು ಚೆನ್ನಾಗಿ ಕುಲುಕಿಸಿ ಮತ್ತಷ್ಟು ಸ್ಥಳ ಮಾಡಿ ಹಣ್ಣುಗಳನ್ನಿಡಲು ಹೇಳುತ್ತಿದ್ದಾರೆ:

''ಇನ್ನಾಗುವುದಿಲ್ಲ ಮಹಾರಾಜ್.''

''ಆಗೋದಿಲ್ಲ! ಇಲ್ಲಿ ನೋಡು ಎಷ್ಟೊಂದು ಜಾಗವಿದೆ! ಇನ್ನೂ ಕುಲುಕಿಸು.''

ಇಬ್ಬರು ಬ್ರಹ್ಮಚಾರಿಗಳು ಸೇರಿ ಸ್ವಲ್ಪ ಹೊತ್ತು ಕುಲುಕಿಸಿದ ಮೇಲೆ ಒಂದು ಸೀಮೆಬದನೆ ಹಿಡಿಸುವಷ್ಟು ಮಾತ್ರ ಸ್ಥಳಾವಕಾಶವಾಯಿತು. ಇದೇ ಖುಷಿ ಮಹಾರಾಜರಿಗೆ.

''ಇನ್ನೊಂದೇನಾದರೂ ಸಣ್ಣದು ಹಿಡಿಯುತ್ತದೆಯೋ ಎಂದು ನೋಡಿ, ನೋಡೋಣ.''

''ಇಲ್ಲ ಮಹಾರಾಜ್, ಕಿಂಚಿತ್ತೂ ಜಾಗವಿಲ್ಲ.''

''ನೋಡಿಲ್ಲಿ, ಸ್ವಲ್ಪ ಸಂದಿಯಿದೆ. ಅದರಲ್ಲಿ ನಿಂಬೆಹಣ್ಣು ಹಿಡಿಸುವುದಿಲ್ಲವೆ?''

''ಇಲ್ಲ.''

''ಸರಿ, ಹಾಗಾದರೆ ಈ ಪಹಾಡಿ ಮೆಣಸಿನಕಾಯಿಗಳನ್ನು ತೂರಿಸು.''

ಸೇವಕರು ಪಕ್ಕೆ ಬಿರಿಯುವಂತೆ ನಗುತ್ತಿದ್ದಾರೆ; ಮಹಾರಾಜರೂ ಸಹ ಪೆಟ್ಟಿಗೆ ತುಂಬಲು ಹೋಗಿ, ಇತ್ತ ಅವರ ಗುಡುಗುಡಿಯ ಕೆಂಡ ಆರಿಹೋಗಿದೆ. *(ಮುಂದುವರಿಯುವುದು)*

---

ಹತ್ತುಸಾವಿರ ರೂ.ಗಳನ್ನೂ ಮತ್ತು ಸುಮಾರು ನಲವತ್ತು ಸಾವಿರ ರೂ. ಬೆಲೆಬಾಳುವ ವಸ್ತುಗಳನ್ನೂ ದಾನ ಮಾಡಿದ್ದರು. ಸತೀಶರ ಕಾರ್ಯನಿರ್ವಹಣಾ ಮಂಡಲಿಯೂ ಸಹ ಖಡದಹ ಎಂಬ ಸ್ಥಳಕ್ಕೆ ಹತ್ತಿರವಿರುವ ರಹರಾ ಗ್ರಾಮದ ನಾಲ್ಕು ತೋಟದ ಮನೆಗಳನ್ನೂ ರಾಮಕೃಷ್ಣ ಮಿಷನ್ನಿಗೆ ಸಮರ್ಪಿಸಿತು. ಮಿಷನ್ನಿನ ವಿಶ್ವಸ್ಥ ಮಂಡಲಿಯು ಮೇಲೆ ಹೇಳಿದ ಸ್ವತ್ತನ್ನು ಅನಾಥ ಬಾಲಕರಿಗಾಗಿ ತೆರೆದ ರಾಮಕೃಷ್ಣ ಮಿಷನ್ ಬಾಲಕಾಶ್ರಮಕ್ಕಾಗಿ ಉಪಯೋಗಿಸಿಕೊಂಡಿತು.

೨ ಕೆಲವು ದಿನಗಳ ನಂತರ ಬೇಲೂರು ಮಠದಲ್ಲಿ 'ನದಿಯಾದ ನಿಮಾಯಿ' ಯನ್ನು ಒಂದು ಮಧ್ಯಾಹ್ನ ಅಭಿನಯಿಸಲಾಗಿತ್ತು. ಆಗ ಮಹಾರಾಜರ ಶರೀರ ಬಹಳ ಅಸ್ವಸ್ಥಗೊಂಡಿದ್ದರೂ ಸಹ ಎಲ್ಲರೊಡನೆ ಕುಳಿತು ಅಭಿನಯವನ್ನು ನೋಡಿದ್ದರು.